


### ವಿನ್ಯಾಸದ ಉತ್ತಮ ಮಾಹಿತಿ

'ಸುಧಾ' ಏ.18ರ ಸಂಚಿಕೆಯ ಮುಖಪುಟ ಲೇಖನ ಗೀತಾ ಶ್ರೀನಿವಾಸನ್‌ರ 'ಲಿವಿಂಗ್ ರೂಮ್ ಲಕ್ಸುರಿ', ಮನೆ ವಿನ್ಯಾಸದ ಕುರಿತು ಉತ್ತಮ ಮಾಹಿತಿ ನೀಡಿದೆ.

-ಸು.ವಿಜಯಲಕ್ಷ್ಮಿ, ಶಿವಮೊಗ್ಗ

### ನೀರಿನ ಮಿತಬಳಕೆ ಸಕಾಲಿಕ

'ಪೋಲು ಮಾಡದಿರಿ ನೀರು' ಬೃಂದಾ ಎಸ್ .ರಾವ್ ಬರಹ ಸಕಾಲಿಕವಾಗಿದೆ.

-ನಿತ್ಯ ಎಸ್., ಮೂಡಬಿದಿರೆ

### ನಿರಾಸೆ ತರುವ ದುರಾಸೆ ಬೇಡ

ದುರಾಸೆ ಹೊಂದಿದರೆ, ನಿರಾಸೆಯಾಗುವುದು ನಿಶ್ಚಯ ಎಂಬ ಉತ್ತಮ ಆಶಯವನ್ನು ಡಾ.ಅ.ಶ್ರೀಧರರ ಲೇಖನ ಹೊಂದಿದೆ.

-ನಾರಾಯಣ ಯಾಜಿ, ಶಿರಾಲಿ

### ವಿಭೀಷಣ ಎಲ್ಲಿ? ಪೂಜಾ ಎಲ್ಲಿ?

ಏಪ್ರಿಲ್ 11ರ 'ಸುಧಾ'ದ 'ನೀವು ಕೇಳಿದಿರಿ?' ಅಂಕಣದಲ್ಲಿ 'ರಾಮಾಯಣ'ದ ವಿಭೀಷಣವನ್ನು ಜಗದ ಮೊದಲ ಪಕ್ಷಾಂತರಿ ಎಂದು ರಾಮ್ ಉತ್ತರಿಸಿದ್ದಾರೆ. ಆದರೆ ವಿಭೀಷಣನು ತನ್ನ ಸೋದರ ರಾವಣನ ಮನವನ್ನು ಪರಿವರ್ತಿಸಲು ಸಾಧ್ಯವಾದಷ್ಟು ಪ್ರಯತ್ನಿಸಿ ಅದು ಅಸಾಧ್ಯವಾದಾಗ ಪ್ರತಿಭಟನೆಯ ಸಂಕೇತವಾಗಿ ರಾಮನ ಪಕ್ಷ ಸೇರಿದ್ದ. ಇದೇ ರೀತಿ ಮಾಡಿದ ಇನ್ನೋರ್ವ ವ್ಯಕ್ತಿ 'ಮಹಾಭಾರತ'ದ ದುರ್ಯೋಧನದ ಸೋದರ ಯುಯುತ್ಸು. ಕುರುಕ್ಷೇತ್ರ ಯುದ್ಧಾರಂಭದ ವೇಳೆ ಈತ ಕೌರವರ ಪಕ್ಷ ತ್ಯಜಿಸಿ ಪಾಂಡವರ ಪಕ್ಷಕ್ಕೆ ಬಂದಿದ್ದ. ಇವರಿಬ್ಬರು ಅನ್ಯಾಯದ ಪಕ್ಷದಿಂದ ನ್ಯಾಯದ ಪಕ್ಷಕ್ಕೆ ನಿಷ್ಠೆ ಬದಲಿಸಿದ್ದರಲ್ಲಿ ತಪ್ಪೇನಿದೆ? ಯಾವುದೇ ತತ್ವ– ಸಿದ್ಧಾಂತಗಳಿಲ್ಲದೇ ಸ್ವಾರ್ಥ ಸಾಧನೆಗಾಗಿ ಪಕ್ಷ ಬದಲಿಸುವ ರಾಜಕಾರಣಿಗಳಿಗೆ ಹಾಗೂ ರಾಜಕೀಯವನ್ನು ಹುಡುಗಾಟ ಎಂದು ತಿಳಿದಿರುವ ಪೂಜಾಗಾಂಧಿ ಎಂಬ ಬಣ್ಣದ ಬೊಂಬೆಗೆ ಇಂತಹವರನ್ನು ಹೋಲಿಸಿರುವುದು ಎಷ್ಟು ಸರಿ?

-ದೀಪಕ್, ಕಂಬದಕೋಣೆ

### ಹೊಸ ವರುಷಕೆ ರಸದೌತಣ

'ಸುಧಾ' ಪತ್ರಿಕೆಯ ಯುಗಾದಿ ವಿಶೇಷಾಂಕ ಹೊಸ ವರುಷಕೆ ರಸದೌತಣ ತಂದಿದೆ.

-ಚಂದ್ರಕಾಂತ ಕರದಳ್ಳಿ, ಶಹಾಪುರ

### ಹಣೆಮೇಲೆ ಕುಂಕುಮ ಬೇಕಿತ್ತು

ಯುಗಾದಿ ವಿಶೇಷಾಂಕದ ಮುಖಪುಟದ ರೂಪದರ್ಶಿ ಕೃತಿ ಖರಬಂದಳ ಹಣೆಯ ಮೇಲೆ ಕುಂಕುಮ ಇದ್ದಿದ್ದರೆ ಚೆಲುವು ಇನ್ನೂ ಹೆಚ್ಚುತ್ತಿತ್ತು. ಸಂಪಾದಕೀಯ 'ಚಿಗುರಿನ ಸಂಭ್ರಮ'ಕ್ಕೆ ಆನಂದ ಬಕ್ಷಿಯವರ ಹೂಗೊಂಚಲು ಚಿತ್ರ ಸುಂದರವಾಗಿತ್ತು. ಯುಗಾದಿಯ ಸಿಹಿ ತಿಂಡಿಗಳು ಬಾಯಲ್ಲಿ ನೀರೂರಿಸಿತು.

ಓದುಗರ ವೇದಿಕೆಯಲ್ಲಿ ಕೆ.ಆರ್.ಚೂಡಾಮಣಿ, ಪಾಂಚಜನ್ಯ, ರಂಜನಾ ಬೆಂಗೇರಿ, ಸಾವಿತ್ರಿ ಸೀತಾರಾಂ, ಚ.ಗೌರಮ್ಮ, ಟಿ. ಅಶೋಕಕುಮಾರ್, ಎಸ್.ಮಂಜುನಾಥ್, ಸುಮಿತ್ರಾ ರಾಮಣ್ಣ, ಕೆ.ನಂದಾ, ಛಾಯಾ ಪಿ.ಮಠ್, ಗಾಯತ್ರಿ ಸ್ವಾಮಿ ಪತ್ರಗಳು ಚೆನ್ನಾಗಿದ್ದವು.

'ಮಕ್ಕಳ ಮೈದಾನ' ಅಂಕಣದಲ್ಲಿ ನಾ.ಡಿಸೋಜ, ಲಲಿತಾ ಕೆ.ಹೊಸಪ್ಯಾಟಿ ಅವರ ಕಥೆಗಳು ಹಾಗೂ ಅಮೃತೇಶ್ ತಂಡರರ ಕವಿತೆ ಚೆನ್ನಾಗಿವೆ.

-ಉದಂತ ಶಿವಕುಮಾರ, ಬೆಂಗಳೂರು

### ವಿಶೇಷಾಂಕಕ್ಕೆ ತೋರಣ

ಕಥೆಗಳು ಒಂದಕ್ಕೊಂದು ವಿಭಿನ್ನವಾಗಿವೆ. ಹಾಸ್ಯ ಲೇಖನಗಳು ಮನರಂಜಿಸಿ ಮತ್ತೆ ಮತ್ತೆ ನೆನಪಿಸುತ್ತಿವೆ. 'ಮದುವೆ ದಿನದ ಫಜೀತಿ' ಓದುಗರ ವೇದಿಕೆ ರಸಮಯವಾಗಿ ವಿಶೇಷಾಂಕಕ್ಕೆ ತೋರಣ ಕಟ್ಟಿದಂತಿದೆ.

-ಗುರುಮೂರ್ತಿ ಇಂದ್ರಾಳಿ, ಉಡುಪಿ

### ಸಮಗ್ರ ಸಂಚಿಕೆ




'ಸುಧಾ' ಯುಗಾದಿ ವಿಶೇಷಾಂಕ ಸಂಚಿಕೆಯ ವೈವಿಧ್ಯಮಯ ವಿಷಯಗಳ ಬರಹಗಳನ್ನು ಒಳಗೊಂಡಿದ್ದು– ಸಮಗ್ರ ಎನ್ನಬಹುದಾದ ಸ್ವರೂಪ ಪಡೆದಿದೆ. ಮಹಿಳೆಯರ ಹೊಸಕಾಲದ ಹಾದಿಯಲ್ಲಿ ಒಂದಷ್ಟು ಪುನರಾವರ್ತನೆ ಇದೆ. ಉಮಾ ಅನಂತ್‌ರ 'ನಾದ ಚಿಕಿತ್ಸೆ'ಯಿಂದ ಖಾಯಿಲೆ ವಾಸಿಯಾಗುತ್ತೋ ಬಿಡುತ್ತೋ ಆದರೆ ಸಂಗೀತದ ಬಗ್ಗೆ ಆಸಕ್ತಿ ಮೂಡಿಸುವಂತಿದೆ. ಸುಬ್ಬು ಹೊಲೆಯಾರ್, ಬಸವರಾಜ ಸಬರದ, ಚೆನ್ನಣ್ಣ ವಾಲೀಕಾರರ ಕವಿತೆ ಹೊರತುಪಡಿಸಿದರೆ, ಇತರ ಕವಿತೆಗಳು ಅಷ್ಟೇನೂ ಹೇಳಿಕೊಳ್ಳುವಂತಿರಲಿಲ್ಲ. ಗೀತಾ ನಾಗಭೂಷಣ ಹಾಗೂ ಮಹಮ್ಮದ್ ಕುಳಾಯಿ ಕಥೆಗಳು ತಕ್ಕಮಟ್ಟಿಗೆ ಚೆನ್ನಾಗಿವೆ. ಗುಡಿಹಳ್ಳಿ ನಾಗರಾಜರ 'ಬೀದಿ ನಾಟಕದ ಹಾದಿ' ಚಿಂತನಾರ್ಹವಾಗಿದೆ. ಕಿರುತೆರೆ (ಬರಹ: ರಾಘವೇಂದ್ರ ತೊಗರ್ಸಿ) ಕುರಿತು ಏನಾದರೂ ಬರಹ 'ಸುಧಾ' ಬಳಗದ ಪತ್ರಿಕೆಗಳಲ್ಲಿ ಇದ್ದೇ ಇರುತ್ತದೆ. ಇದು ಸರಿಯಾದ ನಿಲುವು. ಮಹಿಳಾ ನಿರ್ದೇಶಕಿಯರೊಂದಿಗೆ ಹರಟೆ ಓದಿಸಿಕೊಂಡು ಹೋಗುತ್ತದೆ. ಮಕ್ಕಳ ಅಂಕಣದಲ್ಲಿ ಕಂಚ್ಯಾಣಿ ಶರಣಪ್ಪ, ಕೃಷ್ಣಮೂರ್ತಿ ಬಿಳಿಗೆರೆ ಅವರಂತಹ ಲೇಖಕರ ಕವಿತೆಗಳು ಇರಬೇಕಿತ್ತು.

ಸಮಕಾಲೀನ ಸಾಂಸ್ಕೃತಿಕ ಲೋಕದ ಕುರಿತ ಗಹನವಾದ– ಆದರೆ ಓದಿಸಿಕೊಂಡು ಹೋಗುವ ಚೇತೋಹಾರಿಯಾದ ಒಂದು ಚರ್ಚೆ ಇರಬೇಕಿತ್ತು.

-ರುದ್ರೇಶ್ ಬಿ.ಅದರಂಗಿ, ಕೋಲಾರ

CLC
COLD LASER CENTRE
The Miracle Ray

ನೋವೇ ?
ಚಿಂತೆ ಬಿಡಿ !

ಎಲ್ಲಾ ರೀತಿಯ ನೋವುಗಳಿಗೂ ಸುರಕ್ಷಿತ ಹಾಗೂ ಶಸ್ತ್ರಚಿಕಿತ್ಸೆ ರಹಿತವಾದ ಅತ್ಯಾಧುನಿಕ ತಂತ್ರಜ್ಞಾನದ "ಲೇಸರ್" ಚಿಕಿತ್ಸೆ ಲಭ್ಯ.



- ಮಂಡಿ ನೋವು
- ಸೊಂಟ ನೋವು
- ಕತ್ತು ನೋವು
- ಬೆನ್ನು ನೋವು
- ದುಶ್ಚಟಗಳ

ಉಪಶಮನಕ್ಕಾಗಿ ಕೋಲ್ಡ್ ಲೇಸರ್ ಸೆಂಟರ್‌ನ್ನು ಸಂಪರ್ಕಿಸಿ

WALT
WORLD ASSOCIATION FOR LASER THERAPY
ಪ್ರಪಂಚ ಲೇಸರ್ ಚಿಕಿತ್ಸಾ ಸಂಸ್ಥೆಯಿಂದ ಮಾನ್ಯತೆ ಪಡೆದು ವೃತ್ತಿಪರರಿಂದ ನಿರ್ವಹಿಸುತ್ತಿರುವ ಸಂಸ್ಥೆ

#1003/25, 4th M Block
Rajajinagar Entrance,
Near Sujatha Theater Bus Stop
Star Bazaar Circle,
Bangalore-10

enquiry@coldlasercentre.com
www.coldlasercentre.com

080-67309404
9242223335